# ಜಗನ್ಮಾತೆ



ಜಗನ್ಮಾತೆ ಸಾಕಾರಳೇ ಅಲ್ಲ, ನಿರಾಕಾರಳೂ ಕೂಡ. ಆಕೆಯ ರೂಪವನ್ನು ದರ್ಶನ ಮಾಡಲು ಸಾಧ್ಯ. ಭಾವಭಕ್ತಿಗಳಿಂದ ಆಕೆಯ ಅತುಲನೀಯ ರೂಪವನ್ನು ದರ್ಶನ ಮಾಡಲು ಸಾಧ್ಯ. ಭಗವತಿ ವಿವಿಧ ರೂಪಗಳಿಂದ ದರ್ಶನವೀಯುತ್ತಾಳೆ.

ನಾನು ಆಕೆಯನ್ನು ನಿನ್ನೆ ನೋಡಿದೆ. ಅಂಚು ಹೊಲಿಯದ ಕಾಷಾಯ ಉಡುಪು ಹಾಕಿಕೊಂಡಿದ್ದಳು. ನನ್ನೊಡನೆ ಮಾತಾಡಿದಳು.

"ಇಂಥ ತಾಯಿಯ ನಾಮ ನೌಕೆಯ ಹಿಡಿದು ಭವಸಾಗರದೊಳು ತೇಲಿ ನಡೆಯಿರಿ" ಎಂದು ನುಡಿವನು ಭಕ್ತ ರಾಮಪ್ರಸಾದನು.

ಓ ಶರ್ವಪ್ರಿಯೆ ತಾಯಿ, ಸಕಲ ಭಯಹಾರಿಣಿಯೆ
ನಿನ್ನ ನಾಮವ ನಾನು ಕೇಳಿರುವೆನು,
ಅದರಿಂದ ನಿನ್ನಡಿಗೆ ಶರಣಾದೆನು....
ನೀನು ಆದ್ಯಾಶಕ್ತಿ, ನೀ ಜಿತೇಂದ್ರಿಯ ಶಕ್ತಿ;
ಯೋಗಿಜನ ಹೃದಯದಲಿ ನೀ ಪಾರ್ವತಿ
ಓ ದಿವ್ಯ ಶಿವಶಕ್ತಿ ಪಾರುಗಾಣಿಸು ನನ್ನ
ಈ ತೃಷ್ಣೆಯೊಳಗಿಂದ ಮೇಲಕೆತ್ತಿ
ಮತ್ತೆ ಭವಸಾಗರಕೆ ಬೀಳದಂದದಿ ನನಗೆ
ವರವ ಕರುಣಿಸು ತಾಯೆ ವಿಶ್ವಭೂತೆ
ನಿನ್ನ ನಿಜರೂಪವನು ಯಾರು ಬಲ್ಲರು ತಾಯೆ?
ಪಂಚಭೂತಾಧಾರೆ ಲೋಕಮಾತೆ

(ಜಗನ್ಮಾತೆಗೆ) "ತಾಯೆ, ನನ್ನಿಂದ ಪೂಜಾಕಾರ್ಯವನ್ನು ತಪ್ಪಿಸಿಬಿಟ್ಟಿದ್ದೀಯೆ. ದಯವಿಟ್ಟು ನೋಡಿಕೋ ತಾಯೆ, ನನ್ನ ಎಲ್ಲ ಕಾಮನೆಗಳು ಒಂದೂ ಇಲ್ಲದ ರೀತಿಯಾಗಿ ಬಿಟ್ಟುಹೋಗುವ ಹಾಗೆ. ಪರಮಹಂಸ ಕೇವಲ ಬಾಲಕ. ಬಾಲಕನಿಗೆ ತಾಯಿ ಬೇಡವೆ? ಅದಕ್ಕಾಗಿಯೆ ನೀನು ತಾಯಿ, ನಾನು ಮಗು. ತಾಯಿಯಿಲ್ಲದೆ ಮಗು ಹೇಗೆ ತಾನೆ ಇರಬಲ್ಲುದು?"

ಪರಮಹಂಸರು ಭಗವತಿಯೊಡನೆ ಅಂಥಾ ಧ್ವನಿಯಿಂದ ಮಾತಾಡುತ್ತಿದ್ದಾರೆ, ಕಲ್ಲೂ ಕರಗಿಹೋಗಬೇಕು. ಮತ್ತೆ ಭಗವತಿಗೆ ಹೇಳುತ್ತಿದ್ದಾರೆ: "ಕೇವಲ ಅದ್ವೈತ ಜ್ಞಾನವೆ! ಹ್ಯಾಕ್ ಥೂ! ಎಲ್ಲಿಯವರೆಗೆ "ನಾನು" ಎಂಬುದನ್ನು ಇಟ್ಟಿದ್ದೀಯೊ, ಅಲ್ಲಿಯವರೆಗೆ ನೀನು ಇದ್ದೇ ಇದ್ದೀಯೆ.

ಭಗವತಿಗೆ ಅಳುತ್ತ ಅಳುತ್ತ ಹೇಳುತ್ತಿದ್ದೆ : "ತಾಯೆ, ಭಕ್ತರನ್ನು ನೋಡಬೇಕೆಂದು ನನ್ನ ಪ್ರಾಣ ತವಕಪಡುತ್ತಿದೆ. ಅವರನ್ನು ಬೇಗ ನನ್ನ ಹತ್ತಿರಕ್ಕೆ ಕರೆದುಕೊಂಡು ಬಾ." ಆಗ ನನ್ನ ಮನಸ್ಸಿನಲ್ಲಿ ಏನೇನು ಇಚ್ಛೆಗಳು ಏಳುತ್ತಿದ್ದವೊ, ಅವೆಲ್ಲಾ ಪೂರ್ಣಗೊಂಡು ಬಿಡುತ್ತಿದ್ದವು.

ನನಗೆ ಈ ಭಗವದವಸ್ಥೆ ಉಂಟಾದ ನಂತರ ಪೂಜೆಯ ಕೆಲಸ ಮಾಡಲಾಗಲಿಲ್ಲ. ಆಗ ಜಗನ್ಮಾತೆಗೆ ಮೊರೆಯಿಟ್ಟೆ: "ತಾಯೆ, ನನ್ನನ್ನು ನೋಡಿಕೊಳ್ಳುವವರಾರು? ನನ್ನ ಯೋಗಕ್ಷೇಮವನ್ನು ನಾನೇ ನೋಡಿಕೊಳ್ಳುವಂಥ ಶಕ್ತಿ ನನಗಿಲ್ಲ. ನಿನ್ನ ಸಂಬಂಧವಾಗಿ ಕೇಳಬೇಕು ಅಂತ ಇಚ್ಛೆಯಾಗುತ್ತಿದೆ. ಭಕ್ತರಿಗೆ ಊಟಕ್ಕೆ ಹಾಕಬೇಕು ಅಂತ ಆಸೆಯಾಗುತ್ತಿದೆ. ದರಿದ್ರರು ಕಣ್ಣಿಗೆ ಬಿದ್ದರೆ ಏನಾದರೂ ಕೊಡಬೇಕು ಅಂತ ಬಯಕೆಯಾಗುತ್ತಿದೆ. ಇವೆಲ್ಲಾ ನಡೆಯುವ ಬಗೆ ಹೇಗೆ ತಾಯಿ? ಯಾರಾದರೂ ಒಬ್ಬ ಧನಿಕ ನನಗೆ ಸಹಾಯ ನೀಡುವಂತೆ ಮಾಡು." ಅದಕ್ಕಾಗಿಯೆ ಮಥುರಬಾಬು ನನಗೆ ಅಷ್ಟೊಂದು ಸೇವೆ ಸಲ್ಲಿಸಿದುದು.

ಪರಮಹಂಸರು ಭಗವತಿಯನ್ನು ಸಂಬೋಧಿಸಿ ಹೇಳುತ್ತಿದ್ದಾರೆ: "ತಾಯೆ, ಈ ನೈವೇದ್ಯವನ್ನು ನಾನು ತಿನ್ನಲೆ? ಅಥವಾ ನೀನೆ ತಿನ್ನುತ್ತೀಯಾ? ತಾಯಿ, ಕಾರಣಾನಂದರೂಪಿಣಿ." ಜಗನ್ಮಾತೆ ಮತ್ತು ತಾವು ಒಂದೇ ಎಂದು ಪರಮಹಂಸರು ವ್ಯಕ್ತಪಡಿಸಿದರೇನು? ಭಗವತಿಯೇ ಸಂತಾನರೂಪದಿಂದ ಲೋಕಶಿಕ್ಷಣಕ್ಕಾಗಿ ಅವತೀರ್ಣಳಾಗಿದ್ದಾಳೇನು? ಅದಕ್ಕಾಗಿಯೇ ಏನು ಪರಮಹಂಸರು ಈ ರೀತಿ ಹೇಳುತ್ತಿದ್ದಾರೆ?

"ಚಿಕ್ಕ ಮಗುವಿಗೆ ತಾಯಿ ಮಾತ್ರ ಬೇಕು. ತನ್ನ ತಾಯಿಗೆ ಎಷ್ಟು ಐಶ್ವರ್ಯವಿದೆ ಎಂಬುದು ಅದಕ್ಕೆ ಗೊತ್ತಿರುವುದಿಲ್ಲ; ತಿಳಿಯಲಿಚ್ಛಿಸುವುದೂ ಇಲ್ಲ. ಅದಕ್ಕೆ ಕೇವಲ ಗೊತ್ತಿದೆ 'ನನ್ನ ತಾಯಿ ಇದ್ದಾಳೆ; ಇನ್ನು ನನಗೇನು ಯೋಚನೆ?' ಎಂದು. ದಾಸಿಯ ಮಗುವಿಗೂ ಗೊತ್ತಿದೆ, ತನಗೊಬ್ಬಳು ತಾಯಿ ಇದ್ದಾಳೆ ಅಂತ. ಅದಕ್ಕೂ ಯಜಮಾನನ ಮಗುವಿಗೂ ಜಗಳ ಬಂತು ಎಂದರೆ, ಆಗ ಅದು ಹೇಳುತ್ತದೆ, 'ನನ್ನ ತಾಯಿ ಇದ್ದಾಳೆ, ನೋಡಿಕೊ. ಹೋಗಿ ಹೇಳಿಬಿಡುತ್ತೇನೆ.'" ಪರಮಹಂಸರದು ಸಂತಾನಭಾವ.

ಈಗ ಶ್ರೀರಾಮಕೃಷ್ಣರು ಜಗನ್ಮಾತೆಗೆ ಪ್ರಾರ್ಥನೆ ಮಾಡುತ್ತಿದ್ದಾರೆ : "ಹೇ ತಾಯೆ! ಹೇ ಓಂಕಾರ ಸ್ವರೂಪಿಣಿಯೇ! ತಾಯೆ, ನಿನ್ನ ವಿಷಯವಾಗಿ ಜನ ಎಷ್ಟೊಂದು ಹೇಳುತ್ತಾರೆ, ಏನು ಕತೆ! ಆದರೆ ನನಗೇನೂ ಅರ್ಥವಾಗುತ್ತಿಲ್ಲವಲ್ಲ. ನನಗೇನೂ ಗೊತ್ತಿಲ್ಲ ತಾಯೆ. ನಾನು ನಿನ್ನಲ್ಲಿ ಶರಣಾಗತ, ಶರಣಾಗತ. ಕೇವಲ ಇದಿಷ್ಟು, ಎಂದರೆ ನಿನ್ನ ಪಾದ ಪದ್ಮಗಳಲ್ಲಿ ನನಗೆ ಶುದ್ಧ ಭಕ್ತಿಯುಂಟಾಗುವಂತೆ ಕರುಣಿಸಿಬಿಡು ತಾಯೆ. ತಾಯೆ, ನಿನ್ನ ಭುವನಮೋಹಿನೀ ಮಾಯೆಯಿಂದ ನನ್ನನ್ನು ಭ್ರಾಂತಿಗೊಳಿಸಬೇಡ. ನಾನು ನಿನ್ನಲ್ಲಿ ಶರಣಾಗತ, ಶರಣಾಗತ."

(ಶ್ರೀರಾಮಕೃಷ್ಣವಚನವೇದದಿಂದ)